ಹಾಗೆ ದುಃಖವೇನೂ ಇರಲಿಲ್ಲ. ಮೆಲ್ಲಗೆ ಕೇಳಿದೆ, 'ನೀನು ಅವರನ್ನು ಮಾತನಾಡಿಸಿದ್ದೀಯಾ? ನಿನಗೆ ಅವರಿಷ್ಟಾನಾ?' ಶರ್ಮಿಳಾ ಜೋರಾಗಿ ನಗುತ್ತಾ ಹೇಳಿದಳು, 'ಹೂಂ, ಇಷ್ಟ ಆಗದೆ ಏನು? he is my choice. ನನ್ನ ಆಫೀಸ್‌ನಲ್ಲೇ ಕೆಲಸ ಮಾಡ್ತಾನೆ. ಅವನು ನನ್ನ ಒಳ್ಳೆಯ ಸ್ನೇಹಿತ.' ನಾನು ಆಶ್ಚರ್ಯದಿಂದ ಅವಳ ಮುಖವನ್ನೇ ನೋಡುತ್ತಾ ನನ್ನ ಮನದಲ್ಲೆದ್ದ ಪ್ರಶ್ನೆಗಳ ತರಂಗಕ್ಕೆ ಅಣೆಕಟ್ಟು ಕಟ್ಟಲಾರದೆ, ಅವಳ ಹತ್ತಿರಕ್ಕೆ ಸರಿದು, 'ಹೌದಾ, ಮತ್ತೆ.... ನಿಮ್ಮ ಅಪ್ಪ, ಅಮ್ಮ, ಎಲ್ಲರೂ ನಿನ್ನ ಆಯ್ಕೆಗೆ ಒಪ್ಪಿಗೆ ಕೊಟ್ರಾ...Are they happy with your choice and does he belong to the same community...?' ಶರ್ಮಿಳಾ ನನ್ನ ಕೈಹಿಡಿದು ಹೇಳಿದಳು, 'ಹೇ, ನಿನ್ನಿಂದ ಈ ಪ್ರಶ್ನೆಗಳನ್ನೆಲ್ಲಾ ನಾನು ನಿರೀಕ್ಷೆ ಮಾಡಿರಲಿಲ್ಲ. ಆದರೂ ಹೇಳ್ತೀನಿ ಕೇಳು. ಅವನ ಹೆಸರು ರಾಹುಲ್. ಪಂಜಾಬಿ ಹುಡುಗ. ನಾವು ಕರ್ನಾಟಕದವರು... but... things have changed here in India, now.... parents are accepting... ಒಟ್ನಾರೆ, ನಾನು ಬಹಳ ಲಕ್ಕಿ ಅನಿಸ್ತಿದೆ... ಅಪ್ಪ ಅಮ್ಮ ಸಂತೋಷವಾಗಿ ಒಪ್ಪಿಗೆ ಕೊಟ್ಟರು. ನಾನು ಕೂಡಾ ಅವರ ಭಾವನೆಗಳಿಗೆ ನೋವಾಗದಂತೆ ಎಲ್ಲ ಹೇಳಿರುವೆ. ನೀವು ಮೊದಲು ಹುಡುಗನನ್ನು ಅವರ ಮನೆಯವರನ್ನು ಭೇಟಿ ಮಾಡಿ ಆಮೇಲೆ ಹೇಳಿ ಅಂತ. ಅವರಿಗೂ ಅಳಿಯನನ್ನು ಒಪ್ಪುವ ಬಗ್ಗೆ ಆಯ್ಕೆ ಕೊಟ್ಟೆ. ನಂತರ ಅವರು ಎಲ್ಲವನ್ನೂ ವಿಚಾರ ಮಾಡಿ ಒಪ್ಪಿಗೆ ನೀಡಿದರು. ನಾನೇ ಲಕ್ಕಿ ಅಲ್ವಾ' ಎನ್ನುತ್ತಾ ನನ್ನ ಕೈಹಿಡಿದು ಗಿರಗಿಟ್ಟಲೆ ಆಡುತ್ತಾ ನುಡಿದಳು.

ನನಗೆ ಒಂದು ಕ್ಷಣ ಗೊಂದಲವಾಯಿತು. ನನ್ನ ಅಮ್ಮ ಏಕೆ ಹೀಗೆ? ಎನ್ನಿಸದಿರಲಿಲ್ಲ.... ಒಳಗೆ ಡ್ರಾಯಿಂಗ್ ರೂಮ್‌ನಲ್ಲಿ ಅತ್ತೆ, ಮಾವ, ಅಮ್ಮ ಎಲ್ಲರೂ ಕುಳಿತು ಮಾತನಾಡುತ್ತಿದ್ದರು. ಒಂದು ಕ್ಷಣ ಅತ್ತೆ, ಮಾವ ಇಬ್ಬರೂ ಹೊಸ ವ್ಯಕ್ತಿಗಳಾಗಿ ಕಂಡರು. ಅಮ್ಮ ನನ್ನ ಕಲ್ಪನೆಯಲ್ಲಿ ನೆಟ್ಟಿದ್ದ ಬೀಜ ಜೊಳ್ಳೆನಿಸಿತ್ತು. ಅಮ್ಮನ ಸಾಂಗತ್ಯದಿಂದ ನಾನು ಭಾರತದವರನ್ನೆಲ್ಲಾ ಹಿಂದುಳಿದವರು, ಮೂಢನಂಬಿಕೆಯವರು, ವ್ಯಕ್ತಿ ಸ್ವಾತಂತ್ರ್ಯವನ್ನು ಗೌರವಿಸುವುದಿಲ್ಲ ಎಂದೆಲ್ಲಾ ನನ್ನಲ್ಲಿ ನಾನೇ ಕಟ್ಟಿಕೊಂಡ ಕಲ್ಪನೆಯ ತಳಹದಿ ಅಲುಗಾಡಹತ್ತಿತ್ತು. ಆದರೂ ಅತ್ತೆಯನ್ನೊಮ್ಮೆ ಮಾತನಾಡಿಸಬೇಕು, ಅವರಿಗೂ ಅಮ್ಮನ ಹಾಗೆ ಬೇಜಾರಾಗಿತ್ತೋ ಏನೋ ಎಂದು ತಿಳಿದುಕೊಳ್ಳುವ ಕುತೂಹಲ ನನ್ನನ್ನು ಆಗಾಗ ಕಾಡಹತ್ತಿತ್ತು. ಒಂದು ದಿನ ಅತ್ತೆಯೊಬ್ಬರೇ ಇರುವಾಗ ನಾನು ಮೆಲ್ಲನೆ ಅವರಿದ್ದಲ್ಲಿಗೆ ಹೋಗಿ ಅವರನ್ನು ಮಾತಿಗೆಳೆದೆ. 'ಅತ್ತೆ ಏನ್ಮಾಡ್ತಾ ಇದೀರಾ? ಬ್ಯುಸಿನಾ' 'ಓ ಸಂಯುಕ್ತಾ ಬಾ. ಏನ್ಸಮಾಚಾರ.. ನೋಡು ನಿನಗೆ ಅಂತ ಈ ಸೀರೆ ತೆಗೆದುಕೊಂಡೆ...ಆದರೆ ನಿನಗೆ ಸೀರೆ ಉಡಲು ಇಷ್ಟ ಇಲ್ಲದಿದ್ದರೆ ಪರವಾಗಿಲ್ಲ. ನಿನ್ನ ಇಷ್ಟದಂತೆ ಇರು.' 'ಓ ಸೀರೆ ತುಂಬಾ ಚೆನ್ನಾಗಿದೆ ಅತ್ತೆ. ಆದರೆ ಇದನ್ನು ಉಡೋದು ಹೇಗೆ I feel very uncomfortable in it'

ಅತ್ತೆ ಜೋರಾಗಿ ನಗುತ್ತಾ, 'ಅದಕ್ಕೇ ಹೇಳಿದ್ದು ನಿನಗಿಷ್ಟ ಬಂದ ಹಾಗೆ ಡ್ರೆಸ್ ಮಾಡಿಕೋ' 'ಅತ್ತೆ, ನಾನು ನಿಮ್ಮನ್ನ ಒಂದು ಮಾತು ಕೇಳಬೇಕು' 'ಹೇಳು ಸಂಯುಕ್ತಾ ಏನು?' 'ರಾಹುಲ್‌ನನ್ನು ನೀವು ಮನಸಾರೆ ಒಪ್ಪಿದ್ದೀರಾ? ಏಕೆಂದರೆ ಅವರು ಪಂಜಾಬಿ, ನಾವು ಕನ್ನಡವರು... ಮತ್ತೆ ಮಾವ ಏನಂದ್ರು... ಅತ್ತೇ. ನಾ ಹೀಗೇ ಕೇಳ್ತಾ ಇದೀನಿ ಅಂತ ಬೇಜಾರ್ ಮಾಡ್ಕೊಬೇಡಿ.' 'ಬೇಜಾರೇನಿಲ್ಲಾ ಸಂಯುಕ್ತಾ... ಇದೆಲ್ಲ ಸಹಜ... ಮೊದಲಿನಿಂದ ಶರ್ಮಿಳಾ ತುಂಬಾ ಸ್ವತಂತ್ರ ಮನೋಭಾವದ ಹುಡುಗಿ. ನಮಗೆ ಅವಳೊಬ್ಬಳೇ ಮಗಳು. ನಿನ್ನಾಗೆ ಅವಳನ್ನೂ ತುಂಬಾ ಮುದ್ದಿನಿಂದ ಸಾಕಿದ್ವಿ..'

ಮಧ್ಯದಲ್ಲೇ ಅವರನ್ನು ತಡೆದು ಆತುರದಿಂದ ಕೇಳಿದೆ, 'ಅದೆಲ್ಲ ಸರಿ ಅತ್ತೆ... ಆದ್ರೆ..... ಆದ್ರೆ ನಿಮಗೆ ಅವಳು ರಾಹುಲ್ ವಿಷಯ ಹೇಳಿದಾಗ ಬೇಜಾರಾಗಲಿಲ್ವಾ' 'ಹೂಂ, ಮೊದಲು ಶಾಕ್ ಆಯ್ತು. ಯಾಕಂದ್ರೆ ನಾವೇ ಅವಳಿಗೆ ಗಂಡು ಹುಡುಕಿ ಮದುವೆ ಮಾಡ್ಬೇಕು... ನಮ್ ಜಾತಿಯಲ್ಲೇ, ಅಂತೆಲ್ಲಾ ಅನ್ಕೊಂಡಿದ್ದೆವಲ್ಲಾ. ಆದ್ರೆ ಇವಳು ಧುತ್ತಂತ ನಮ್ಗೆ ಈ ವಿಷಯ ಹೇಳಿದ್ಲು... ಆದ್ರೆ ಸಂಯುಕ್ತಾ, ನಾವ್ ಯೋಚ್ನೆ ಮಾಡಿದ್ವಿ, ಮದುವೆ ಅಂದ್ರೆ ಗಂಡ ಹೆಂಡತಿ ಇಬ್ಬರೂ ಒಬ್ಬರನ್ನೊಬ್ಬರು ಅರ್ಥ ಮಾಡ್ಕೊಳ್ಳೋದು ಮುಖ್ಯ ಅಲ್ವಾ... ನಾವ್ ನೋಡಿ ಮದುವೆ ಮಾಡಿದ್ರೆ ಶರ್ಮಿಳಾಗೆ ಇಷ್ಟ ಆಗದೇ ಹೋದ್ರೆ...ಅಂತ. ಮತ್ತೆ ಶರ್ಮಿಳಾ ನಮ್ಮ ಒಪ್ಪಿಗೇನಾ ಕೇಳಿದ್ಲು. ಟೈಮ್